ಓ.ಎಸ್. ನಂ: 18/2016

ಪಿ.ಡಬ್ಲ್ಯೂ: 01

ದಿನಾಂಕ: 22-06-2018 ರಂದು ಮುಂದುವರೆದ ಮುಖ್ಯವಿಚಾರಣೆಗೆ ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಸಾಕ್ಷ್ಯ ರೂಪದಲ್ಲಿ ಹಾಜರು ಪಡಿಸಿರುವ ನನ್ನ ಮುಂದುವರೆದ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿನ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ ಹಾಗೂ ತಿಳಿದುಕೊಂಡು ನನ್ನ ಸಹಿಯನ್ನು ಮಾಡಿದ್ದೇನೆ.

ಮುಂದುವರೆದ ಮುಖ್ಯ ವಿಚಾರಣೆ: ವಾದಿ ಪರ - ಶ್ರೀ ಬಿ.ಕೆ. ವಕೀಲರಿಂದ.

1. ಸರ್ವೆ ನಂ. 578/2 ರ 20 ಪಹಣಿಗಳನ್ನು ಹಾಜರು ಪಡಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ: 01 ರಿಂದ ನಿಪಿ: 20 ಎಂದು ಗುರ್ತಿಸಲಾಯಿತು.

2. ಋಣಭಾರ ರಾಹಿತ್ಯ ಪ್ರಮಾಣ ಪತ್ರವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ: 21 ಎಂದು ಗುರ್ತಿಸಲಾಯಿತು.

3. ಉಪ-ತಹಶೀಲ್ದಾರ್, ನಾಡಕಾರ್ಯಾಲಯ, ಕೊಟ್ಟೂರುರವರು ನೀಡಿರುವ ಹಿಂಬರಹವನ್ನು ಹಾಜರು ಪಡಿಸಿದ್ದು ಅದನ್ನು ನಿಪಿ: 22 ಎಂದು ಗುರ್ತಿಸಲಾಯಿತು.

4. ಸೂಪರ್‌ವೈಸರ್, ಭೂಮಾಪನ ಶಾಖೆ, ತಾಲ್ಲೂಕು ಕಛೇರಿ, ಕೂಡ್ಲಿಗಿಯವರು ನೀಡಿರುವ ಫೀಲ್ಡ್ ಸ್ಕೆಚ್‌ನ್ನು ಹಾಜರು ಪಡಿಸಿದ್ದು ಅದನ್ನು ನಿಪಿ: 23 ಎಂದು ಗುರ್ತಿಸಲಾಯಿತು.

ವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಸಾಕ್ಷಿಯ ಮುಂದಿನ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಕೂಡ್ಲಿಗಿ.